ತಳಮಳಿಸಿದ. ಅಷ್ಟಕ್ಕೂ ಅವ್ವ ಜಗಳ ಮಾಡಿದ್ದಾದರೂ ಏಕೆ? ರಾತ್ರಿ ಮೊಮ್ಮಗಳು ತಿಂದುಬಿಟ್ಟಿದ್ದ ಹಳಸಿ ನೀರಾಡುತ್ತಿದ್ದ ತಂಗಳನ್ನವನ್ನು ಬೆಳಗ್ಗೆ ಸೊಸೆ ತಿನ್ನಲು ಕೊಟ್ಟಳೆಂದು ತಾನೆ! ತನ್ನ ಐವತ್ತು ವರ್ಷದ ಸಾಂಸಾರಿಕ ಜೀವನದಲ್ಲಿ ಉಪವಾಸವಿದ್ದರೂ ಪಕ್ಕದ ಮನೆಯಿಂದ ಕಡ ಬೇಡಿ ಕೂಡ ತಿನ್ನದ ಭಯಂಕರ ಸ್ವಾಭಿಮಾನಿಯಾಗಿದ್ದ ಅವ್ವ ಇಂಥದನ್ನೆಲ್ಲ ಸಹಿಸುವಳೇ? ಪ್ರತಿಭಟಿಸಿದ್ದಳು. ಅವತ್ತಿನ ಕಾಲಕ್ಕೆ ಆಕೆ ಏನಾದರೂ ನಾಲ್ಕು ಅಕ್ಷರ ಓದಿಕೊಂಡಿದ್ದರೆ ಇಷ್ಟರಲ್ಲಿ ದೊಡ್ಡ ಹೋರಾಟಗಾರ್ತಿ ಆಗಿರುತ್ತಿದ್ದಳೇನೋ!...

ಊರವರೆಲ್ಲ ಬಂದು ನೋಡಿಕೊಂಡು ಹೋದರು. ಊಟ ಮುಗಿಸಿದವರು, ಪಾಪ, ಹೆಣದ ಮನೆಯವರು ಉಂಡರೋ ಇಲ್ಲವೋ ಎಂದು ನೆನಪಿಸಿಕೊಂಡು ಬಂದು, ಹಸಿವಿಲ್ಲ, ಬೇಡವೆಂದರೂ ಬಲವಂತ ಮಾಡಿ ಕರಕೊಂಡು ಹೋಗಿ 'ಅಯ್ಯೋ, ಇವತ್ತು ನಿಮ್ಮನೆ, ನಾಳೆ ನಮ್ಮನೆ... ಬರ್‍ರೀ ಯಾರು ಶಾಶ್ವತ' ಎಂದು ಉಣ್ಣಿಸಿದರು. ರಾತ್ರಿಗೆಲ್ಲ ಭಜನಾ ಮಂಡಳಿಯವರು ಯಾರೂ ನಿದ್ದೆ ಮಾಡದಂತೆ ತಾರಕ ಸ್ವರದಲ್ಲಿ ಭಜನೆ ಮಾಡುತ್ತಿದ್ದರು. ಅದರ ಮಧ್ಯೆಯೇ ಅವ್ವನ ಗುಣಗಾನ, ಬೈಗುಳ, ರೋದನ, ಆಕ್ರಂದನ ಇವೆಲ್ಲ ಆಗಾಗ ಬಂದುಹೋಗುತ್ತಿದ್ದ ಮಳೆಯಂತೆ ಬರುತ್ತಿದ್ದವು, ಹೋಗುತ್ತಿದ್ದವು. ಮೊದಲ ದಿನ ಹೆಚ್ಚೂ ಕಡಿಮೆ ಇಡೀ ರಾತ್ರಿ ಹದಿನೈದಿಪ್ಪತ್ತು ಜನ ಕಾದಿದ್ದರು. ಆದರೆ ಎರಡನೇ ದಿನಕ್ಕೆ ರಾತ್ರಿ ಹೊತ್ತಿರಲಿ, ಹಗಲಿಗೇ ಜನ ಇಲ್ಲದಂತಾಗಿತ್ತು. ಮನೆ ಆಚೆ ಮಲಗಿಸಿದ್ದ ಹೆಣವನ್ನು ಯಾವುದಾದರೂ ನಾಯೋ ನರಿಯೋ ಭಂಗ ಮಾಡಿಬಿಟ್ಟೀತೆಂದು ನರಸಯ್ಯ ಕಾದು ಕೂತ. ಕ್ರಮೇಣ ಕ್ರಮೇಣ ಒಬ್ಬೊಬ್ಬರೇ ಕಳಚಿಕೊಂಡು ಮೇಲೆ ಉಳಿದಿದ್ದ ಅವನಿಗೂ ಅಂಗಳದಲ್ಲಿ ಹಂಗೇ ನಿದ್ದೆಬಂದುಬಿಟ್ಟಿತು.

★ ★ ★

ಫ್ಲೈಟ್ ಮತ್ತೆ ಟೇಕ್ಆಫ್ ಆಯಿತು. ಮತ್ತೆ ಮತ್ತೆ ಅವ್ವನ ನೆನಪುಗಳೇ... ಅವ್ವಳದು ಎಂಥ ಗಟ್ಟಿದೇಹ! ಅವಳ ಮೈಯಲ್ಲಿ ಮಾಂಸವೇ ಇಲ್ಲ, ಬರೀ ಮೂಳೆಯೇ ಎಲ್ಲ ಎನ್ನುವಂಥ ಚಕ್ಕೆ ಜೀವ. ಅವಳ ಮೈಯ ರಕ್ತಮಾಂಸವೆಲ್ಲ ದುಡಿಯುವಾಗ ಸುರಿಯುತ್ತಿದ್ದ ಬೆವರಿನೊಂದಿಗೇ ಕರಗಿಹೋಗಿರಬೇಕು! ಗದ್ದೆ ಕೆಲಸದ ಜೊತೆಜೊತೆಗೆ ಪಶ್ಚಿಮದ ಕಡೆಗಿದ್ದ ಕಾಡಿಗೆ ನುಗ್ಗಿ ತಂಗಡಿ ಹೂವು ಕಿತ್ತುಕೊಂಡು ಬಂದು ಒಣಗಿಸಿ ಟೀ ಮಾಡಿಕೊಡುತ್ತಿದ್ದಳು. ಮನೆಯ ನೆಲ ಗುಡಿಸಲು ಬೇಕಾದ ಹಂಚಿಕಡ್ಡಿಗಳನ್ನು ಒಂದೊಂದೇ ಆಯ್ದು ಕೊಯ್ದುಕೊಂಡು ಪೆಂಡಿಕಟ್ಟಿ ತಂದು ಒಣಗಿಸಿ ಪೊರಕೆ ಮಾಡುತ್ತಿದ್ದಳು. ಕಸಪೊರಕೆ ಗಿಡಗಳನ್ನು ಕೊಯ್ದು ಒಣಗಿಸಿ ಅಂಗಳದ ಕಸ ಗುಡಿಸಲು, ಕಣ ಸಾರಿಸಲೆಂದು ತಯಾರಿಸಿ ಅಟ್ಟದಲ್ಲಿ ಪೇರಿಸಿಡುತ್ತಿದ್ದಳು.

ಗಂಡನ ದಾಯಾದಿಗಳು ವಿಭಾಗ ಮಾಡಿಕೊಂಡು ಇವರ ಕುಟುಂಬವನ್ನು ಮನೆಯಿಂದ ಆಚೆ ಹಾಕಿದಾಗ, ಬೀದಿಗೆ ಬಿದ್ದ ಸಂಸಾರವನ್ನು ಬೇಡಿ ಪಡೆದ ಯಾರದೋ ಕೊಟ್ಟಿಗೆಯಲ್ಲಿ ಕೂಡಿಟ್ಟು ರಕ್ಷಿಸಿದ್ದಳು. ಕೆಳಗಿನ ಕೇರಿಯ ಕುಂಬಾರಮ್ಮನ ಬಳಿ ಕಡ ಪಡೆದು ತಂದ ಮಣ್ಣ ಪಾತ್ರೆಗಳಿಂದ ಅಡುಗೆ ಮಾಡಿ ಎಲ್ಲರಿಗೂ ಉಣ್ಣಿಸಿದ್ದಳು. ಯಾವ ಕಾಡುಪ್ರಾಣಿಗಳಿಗೂ ಹೆದರದೇ ಒಬ್ಬಂಟಿಯಾಗಿ ಗಿಡಗಂಟೆಗಳಲ್ಲೆಲ್ಲ ನುಗ್ಗಿ ಸೌದೆ ತಂದು, ಹೊಗೆಯನ್ನು ಲೆಕ್ಕಿಸದೇ ಬಿದಿರ ಊದುಕೊಳವೆಯಿಂದ ಮೂರು ಬುಗುಟಿನ ಮಣ್ಣಿನ ಒಲೆ ಊದೀ ಊದಿ ಬೆಳಗ್ಗೆ–ಸಂಜೆ ಅಡುಗೆ ಮಾಡಿ ಎಲ್ಲರ ಹೊಟ್ಟೆಯ ಚೀಲ ತುಂಬಿಸುತ್ತಿದ್ದಳು.

ಗಂಡನ ಸರಿಸಮವಾಗಿ ಕಾಡಿಗೆ ಹೋಗಿ ಗಾಡಿ ತುಂಬ ಸೌದೆ ತುಂಬಿ ತಂದು ಊರಲ್ಲಿ ಮಾರಿ ಕಾಳು ಕಡಿ ಕೊಂಡುಕೊಳ್ಳುತ್ತಿದ್ದಳು. ಅದರಲ್ಲಿ ನಾಲ್ಕಾಣೆ ಎಂಟಾಣೆ ಉಳಿಸಿ, ಎಲ್ಲರ ಸಾಲ ತೀರಿಸಿ, ಚಿಬ್ಬಿನಗಲದ ಸೈಟನ್ನು ಖರೀದಿಸಿ, ಮಣ್ಣು ಮಿದ್ದು ಗೋಡೆ ಕಟ್ಟಿ ಸ್ವಂತದ್ದೆಂಬ ಒಂದು ಮನೆ